# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 825 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಅರವಿಂದ ಕುಮಾರ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 26-12-2022 |
| **ಉತ್ತರಿಸುವ ಸಚಿವರು** | : | ಪ್ರವಾಸೋದ್ಯಮ, ಜೀವಿಶಾಸ್ತ್ರ,<br>ಹಾಗೂ ಪರಿಸರ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿ ಬರುವ ಬರಿದ್‌ಶಾಹಿ ಹೋಟೆಲ್ ಭೂಮಿ(ಜಮೀನು) ಮತ್ತು ಕಟ್ಟಡದ ವಿಸ್ತೀರ್ಣ ಎಷ್ಟು; | ಬೀದರ್ ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿ ಬರುವ ಬರಿದ್‌ಶಾಹಿ ಹೋಟೆಲ್ ಘಟಕದ ಒಟ್ಟು ವಿಸ್ತೀರ್ಣ 88,460 Sq. Feet ಇರುತ್ತದೆ. |
| ಆ) | ಈ ಭೂಮಿ ಮತ್ತು ಕಟ್ಟಡಗಳು ಯಾರ ಸುಪರ್ದಿಯಲ್ಲಿವೆ ಅವುಗಳನ್ನು ಯಾರಿಗಾದರೂ ಬಾಡಿಗೆ ರೂಪದಲ್ಲಿ ನೀಡಲಾಗಿದೆಯೇ; ನೀಡಿದ್ದಲ್ಲಿ ಎಷ್ಟು ವರ್ಷಗಳವರೆಗೆ ನೀಡಲಾಗಿದೆ ಈಗ ಬಾಡಿಗೆ/ಗುತ್ತಿಗೆ ನೀಡಿ ಎಷ್ಟು ವರ್ಷಗಳಾಗಿವೆ; | ಹೋಟೆಲ್ ಬರಿದ್‌ಶಾಹಿ, ಬೀದರ್ ಘಟಕವು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೆಸರಿನಲ್ಲಿರುತ್ತದೆ.<br><br>ಸದರಿ ಘಟಕವನ್ನು ದಿನಾಂಕ:27-09-2003 ರಿಂದ 30 ವರ್ಷಗಳ ಅವಧಿಗೆ ಶ್ರೀ ವಿಶ್ವನಾಥ್ ಶೆಟ್ಟಿ, ಪ್ರೋಪ್‌ರೈಟರ್ ಹೋಟೆಲ್ ಮೈಕಾನ, ಇವರಿಗೆ ಆರ್.ಓ.ಎಂ.ಟಿ. ಆಧಾರದ ಮೇಲೆ ನೀಡಲಾಗಿದೆ. |
| ಇ) | ಈ ಗುತ್ತಿಗೆ/ಬಾಡಿಗೆಯಿಂದ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ; ಬಾಡಿಗೆ/ಗುತ್ತಿಗೆ ನೀಡಲು ಇರುವ ಮಾನದಂಡಗಳೇನು; | ಸದರಿ ಘಟಕವನ್ನು ತಿಂಗಳ ಗುತ್ತಿಗೆ/ಬಾಡಿಗೆಗೆ ನೀಡಿರುವುದಿಲ್ಲ. ಆದರೆ, ಸದರಿ ಘಟಕವನ್ನು 2022ರಲ್ಲಿ ವಾರ್ಷಿಕವಾಗಿ ರಿಯಾಯಿತಿ ಮೊತ್ತ ರೂ.2,75,000/- ಪಾವತಿ ಆಗಿರುತ್ತದೆ.<br><br>ಪ್ರಸ್ತುತ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು Renovation, Operation, Maintenance and Transfer (ROMT) ಆಧಾರದ ಮೇಲೆ ಘಟಕಗಳನ್ನು ನೀಡಲು ಚಾಲ್ತಿಯಲ್ಲಿರುವ ಮಾನದಂಡಗಳು ಈ ಕೆಳಕಂಡಂತಿರುತ್ತವೆ.<br><br>1. The bidder should be a company incorporated in India under the Indian Companies Act, 1956/2013 and subsequent amendments there to or a Partnership Firm under The Indian Partnership Act 1932 or Limited Liability Partnership act 2008 with a registered office and operations in India.<br>2. The Bidder should have at least 3 years of experience in operating a Tourism Project (at least since August 2017) as of the date of Notice inviting Tender (NIT)<br>The Tourism Project can be either owned & operated by the Bidder or it can be operated on a lease / concession / management contract basis by the Bidder.<br>3. The Bidder should have a minimum average annual turnover or at least INR 1 Crore (Rupees One Crore only) in the 3 financial years.<br>4. The Bidder should not have been blacklisted/barred/show-caused against by any Central or State Government or PSU and should not be involved in any major litigation that may affect or compromise the delivery of service required. |

| | | |
|---|---|---|
| | | 5. The Bidder must submit a duly executed Power of Attorney in favour of the Authorized Signatory of the Bidder or a Copy of Board Resolution duly authorizing signatory for signing this bid |
| ಈ) | ಈ ಭೂಮಿಯಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಿ ಅದನ್ನು ಮತ್ತೊಬ್ಬರಿಗೆ ನೀಡಲು ಅವಕಾಶವಿದೆಯೇ; ಬಾಡಿಗೆ ನೀಡಿದ್ದಲ್ಲಿ ಅಂತಹವರ ವಿರುದ್ಧ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು? | ರಿಯಾಯಿತಿ ಕರಾರಿನನ್ವಯ ಈ ಭೂಮಿಯಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಿ, ಅದನ್ನು ಮತ್ತೊಬ್ಬರಿಗೆ ಬಾಡಿಗೆ ನೀಡಲು ಅವಕಾಶವಿರುವುದಿಲ್ಲ.<br><br>ಆದರೆ, ಸದರಿ ಘಟಕದ ರಿಯಾಯಿತಿದಾರರು (Concessionaire) ರಿಯಾಯಿತಿ ಕರಾರಿನ (Concession Agreement) ನಿಯಮಗಳನ್ನು ಉಲ್ಲಂಘನೆ ಮಾಡಿ, ಘಟಕದಲ್ಲಿ ನಿಗಮದ ಅನುಮತಿ ಇಲ್ಲದೇ ಅನಧಿಕೃತವಾಗಿ 13 ಅಂಗಡಿ ಮಳಿಗೆಗಳು ಮತ್ತು ಶಾಹಿ ಮಹಲ್‌ನ್ನು ನಿರ್ಮಿಸಿದ್ದು, ಕರಾರಿನ ನಿಯಮವನ್ನು ಉಲ್ಲಂಘಿಸಿದ್ದರಿಂದ, ರಿಯಾಯಿತಿ ಕರಾರನ್ನು ರದ್ದುಗೊಳಿಸಿ, ದಿ:28-02-2015 ರಂದು ಘಟಕವನ್ನು ನಿಗಮದ ಸ್ವಾಧೀನಕ್ಕೆ ಹಿಂಪಡೆಯಲಾಗಿರುತ್ತದೆ.<br><br>ಅನಂತರದಲ್ಲಿ ಸದರಿ ಘಟಕದ ರಿಯಾಯಿತಿದಾರರು ದಿ:28-02-2015ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ M.F.A.No. 3740/2015ರ ಮೇಲ್ಮನವಿಯಲ್ಲಿ ಈ ಘಟಕವನ್ನು ನಿಗಮವು ತನ್ನ ಸ್ವಾಧೀನಕ್ಕೆ ಹಿಂಪಡೆಯ ಬಾರದೆಂದು ಮಧ್ಯಂತರ ಆಜ್ಞೆಯನ್ನು ಮತ್ತು ಈ ಪ್ರಕರಣವನ್ನು ಹೈಕೋರ್ಟ್ ಮಧ್ಯಸ್ಥಿಕೆ ಕೇಂದ್ರದಲ್ಲಿ ಬಗೆಹರಿಸಿಕೊಳ್ಳಲು ನಿರ್ದೇಶಿಸಲಾಗಿದೆ.<br><br>ಅದರಂತೆ ರಿಯಾಯಿತಿದಾರರು ಹೈಕೋರ್ಟ್‌ನ ಮಧ್ಯಸ್ಥಿಕೆ ಕೇಂದ್ರದಲ್ಲಿ A.C. 77/2018 ರಂತೆ ಮಧ್ಯಸ್ಥಿಕೆ ದಾವೆಯನ್ನು ಹೂಡಿರುತ್ತಾರೆ.<br><br>ಸದರಿ ದಾವೆಯಲ್ಲಿ ಮಧ್ಯಸ್ಥಿಕೆ ಕೇಂದ್ರವು ರಿಯಾಯಿತಿದಾರರ ಅರ್ಜಿಯನ್ನು ಪರಿಗಣಿಸಿ ರಿಯಾಯಿತಿ ಕರಾರನ್ನು ರದ್ದುಗೊಳಿಸಿರುವ ನೋಟೀಸ್ ದಿ:11-12-2014 ಮತ್ತು ದಿ:28-02-2015ರ ಆದೇಶವು ಕಾನೂನುಬಾಹಿರವೆಂದು ಮತ್ತು ಘಟಕವನ್ನು ರಿಯಾಯಿತಿ ದಾರರಿಂದ ಹಿಂಪಡೆಯದಂತೆ ಶಾಶ್ವತ ನಿರ್ಬಂಧ ಆಜ್ಞೆಯನ್ನು ಹೊರಡಿಸಿ ಆದೇಶ ಹೊರಡಿಸಿರುತ್ತದೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ ನಿಗಮದಿಂದ Com A.S.No.163/2019 ರಂತೆ Commercial ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಸದರಿ ಮೇಲ್ಮನವಿಯಲ್ಲಿ ನ್ಯಾಯಾಲಯವು ಮಧ್ಯಸ್ಥಿಕೆ ನ್ಯಾಯಾಲಯ ನೀಡಿರುವ ಆದೇಶವನ್ನು ಅನೂರ್ಜಿತಗೊಳಿಸಿ ಕರಾರನ್ನು ರದ್ದುಗೊಳಿಸಿ ಘಟಕವನ್ನು ನಿಗಮ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಂತೆ ಆದೇಶಿಸಿರುತ್ತದೆ.<br><br>ಮುಂದುವರೆದು, ಸದರಿ ಆದೇಶದಂತೆ ನಿಗಮವು ಘಟಕವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಕ್ರಮ ವಹಿಸಲಾದ ಹಿನ್ನೆಲೆಯಲ್ಲಿ ರಿಯಾಯಿತಿದಾರರು Commercial A.S.No. 163/2019ನ ನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆಯನ್ನು ಕೋರಿ Commercial ಅಪೀಲು ಸಂಖ್ಯೆ: COMP AP No.159/2022 ರಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. |

..3..

| | | |
|---|---|---|
| | | ಪ್ರಸ್ತುತ ಮೇಲ್ಮನವಿಗೆ ನ್ಯಾಯಾಲಯವು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಆದೇಶವು ಈ ಕೆಳಕಂಡಂತಿರುತ್ತದೆ.<br><br>"It is directed that the Corporation during the pendency of the appeal shall not interfere with the possession of the appellant over the premises in question. It is made clear that findings/observations made in this order are only for the purposes of deciding the application for temporary injunction and shall have no bearing on merits. Accordingly I.A.1/22 is allowed."<br><br>ಪ್ರಸ್ತುತ ಈ ಪ್ರಕರಣವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪರಿಗಣನೆಗಾಗಿ ಬಾಕಿ ಉಳಿದಿದೆ. |

ಸಂಖ್ಯೆ: **TOR 350 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ
ಹಾಗೂ ಪರಿಸರ ಸಚಿವರು